# ದುರ್ಗಾಪೂಜೆ



ಅಧರಸೇನ ಪರಮಹಂಸರನ್ನು ತನ್ನ ಮನೆಗೆ ದುರ್ಗಾಪೂಜೆಗೆ ಆಹ್ವಾನಿಸಿದ್ದ. ಸಾಯಂ ಮಂಗಳಾರತಿ ನೋಡಲು ಪರಮಹಂಸರು ಪೂಜಾಗೃಹಕ್ಕೆ ಬಂದಿದ್ದಾರೆ. ಮಂಗಳಾರತಿ ಮುಗಿದ ನಂತರ ಪರಮಹಂಸರು ಭಾವಾವಿಷ್ಟರಾಗಿ ನಿಂತುಕೊಂಡೇ ಭಗವತಿಯ ಸಂಬಂಧವಾದ ಒಂದು ಸ್ತೋತ್ರವನ್ನು ಹೇಳಲಾರಂಭಿಸಿದ್ದಾರೆ :

ಮರಣಭಯ ವಿಹ್ವಲನು ನಾನಾದೆನೆಲೆ ತಾಯಿ  
ಪಾರುಗಾಣಿಸು ನನ್ನ ಭವತಾರಿಣಿ.  
ನೀನು ಗಮನಿಸದಿರಲು ನಾಶವಾಗುವೆ ನಾನು,  
ಕಾಪಾಡು, ಕಾಪಾಡು, ಭಯಹಾರಿಣಿ......  
ಸಕಲಲೋಕದ ತಾಯಿ, ಸರ್ವಜನರಾಧಾರೆ  
ಲೋಕಮೋಹಿನಿ ಮತ್ತೆ ಜಗತ ಜನನೀ.....  
ಓ ಜಗನ್ಮಾತೆ ಗಂಗೆ ಪರಮಗತಿದಾಯಿನೀ  
ಓ ಸದಾನಂದೆ, ಶಿವೆ, ಚಿರಂತನೇ.  
ಸಗುಣ-ನಿರ್ಗುಣ ರೂಪೆ ಸರ್ವಸ್ವರೂಪಿಣೇ,  
ಶರ್ವಪ್ರಿಯೆ, ಘನ ಮಹಿಮೆ, ನಿನ್ನಮಿತ ಲೀಲೆಗಳ  
ಯಾರು ಬಲ್ಲರು ಹೇಳು ಮೂಲೋಕದಿ?  
ತಾಯಿ ಶ್ರೀ ಕಾಳಿಯೀ ಲೀಲೆಯವಲೋಕನದಿ  
ಸೋಜಿಗದ ಕಡಲೊಳಗೆ ಮನಮುಳುಗಿದೆ  
ಅವಳ ಶ್ರೀಶುಭನಾಮ ಮರಣ ಭಯವನು  
ಕೂಡ ಹೊಡೆದಟ್ಟಿದೆ....

'ದೇವಿಯ ಭಕ್ತರಿಗೆ ಧರ್ಮ, ಮೋಕ್ಷ ಎರಡೂ ದೊರೆಯುತ್ತವೆ. ಸರ್ವತ್ಯಾಗಿಗಳ ಆಕೃತಿ ಒಣಗಿಕೊಂಡಿರುತ್ತದೆ. ಒಮ್ಮೆ ನಾನು ಗಂಗೆಯ ಘಟ್ಟದಲ್ಲಿ ದೇವಿಯ ಭಕ್ತನೊಬ್ಬನನ್ನು ನೋಡಿದೆ. ಆತ ತಾನು ಊಟಮಾಡುತ್ತಿದ್ದ ಹಾಗೆಯೇ ದೇವಿಯ ಪೂಜೆಯನ್ನೂ ಮಾಡುತ್ತಿದ್ದ. ಆತನದು ಸಂತಾನ ಭಾವ.

'ಭಗವತಿಯ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಾಧ್ಯವಾದರೆ, ಅಂದರೆ ಭಗವತಿ ದುರ್ಗೆಯನ್ನು ಹೃದಯ ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಲು ಸಾಧ್ಯವಾದರೆ ಲಕ್ಷ್ಮಿ, ಸರಸ್ವತಿ, ಕಾರ್ತಿಕೇಯ, ಗಣೇಶ ಇವರೆಲ್ಲ ತಾವಾಗಿಯೇ ಅಲ್ಲಿಗೆ ಬರುತ್ತಾರೆ. ಲಕ್ಷ್ಮಿ ಎಂದರೆ ಐಶ್ವರ್ಯ, ಸರಸ್ವತಿ ಎಂದರೆ ಜ್ಞಾನ, ಕಾರ್ತಿಕೇಯ ಎಂದರೆ ಪರಾಕ್ರಮ, ಗಣೇಶ ಎಂದರೆ ಸಿದ್ಧಿ. ಭಗವತಿಯನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೇ ಆದರೆ ಇವೆಲ್ಲ ತಾವಾಗಿಯೇ ದೊರೆತುಬಿಡುತ್ತವೆ.'



೨೯ನೇ ಸೆಪ್ಟೆಂಬರ್ ೧೮೮೪,  
ಸೋಮವಾರ, ಮಹಾನವಮಿ.

ಇಂದು ನವಮಿ ಪೂಜೆ. ಈಗ ತಾನೆ ಬೆಳಗಾಗುತ್ತಿದೆ. ದಕ್ಷಿಣೇಶ್ವರದ ಕಾಳೀ ದೇವಾಲಯದಲ್ಲಿ ಮುಂಜಾನೆ ಮಂಗಳಾರತಿ ಮುಗಿದಿದೆ. ವಾದ್ಯಶಾಲೆಯಿಂದ ಉದಯರಾಗದ ಆಲಾಪನೆ ಕೇಳಿಬರುತ್ತಿದೆ. ಭಗವತಿಯ ಪೂಜೆಗೆ ಸನ್ನಾಹ ನಡೆಯುತ್ತಿದೆ. ಪರಮಹಂಸರು ಇನ್ನೂ ಕತ್ತಲಿರುವಾಗಲೆ, ಬಹಳ ಹೊತ್ತಿಗೆ ಮುಂಚೆ ಎದ್ದಿದ್ದಾರೆ. ಭವನಾಥ, ರಾಮಬಾಬು, ನಿರಂಜನ, ಮಾಸ್ಟರ್ ನಿನ್ನೆ ರಾತ್ರಿಯಿಂದ ಇಲ್ಲಿಯೇ ಇದ್ದಾರೆ, ಪರಮಹಂಸರ ಕೊಠಡಿಯ ಜಗಲಿಯ ಮೇಲೆ ಮಲಗಿದ್ದಾರೆ. ಅವರು ಬೆಳಗ್ಗೆ ಕಣ್ದೆರೆದು ನೋಡುತ್ತಾರೆ, ಪರಮಹಂಸರು ಪ್ರೇಮೋನ್ಮತ್ತರಾಗಿ ನರ್ತಿಸುತ್ತಿದ್ದಾರೆ. ಅವರು ಹೇಳುತ್ತಿದ್ದರು : 'ಜಯ ಜಯ ದುರ್ಗೇ! ಜಯ ಜಯ ದುರ್ಗೇ!' ಎಂದು. ನೋಡಿದರೆ ಒಬ್ಬ ಎಳೆ ಬಾಲಕನಂತೆ! ಮೈಮೇಲೆ ಬಟ್ಟೆಯಿಲ್ಲ. ಭಗವತಿಯ ಹೆಸರನ್ನು ಜಪಿಸುತ್ತಾ ಕೊಠಡಿಯೊಳಗೆ ನರ್ತಿಸುತ್ತ ಸುತ್ತಾಡುತ್ತಿದ್ದರು.

ಪ್ರಾತಃಕಾಲ ಎಂಟು. ಚಳಿಗಾಲದ ತಂಗಾಳಿ ಬೀಸುತ್ತಿತ್ತು. ಪರಮಹಂಸರು ತಮ್ಮ ಹಾಸಿಗೆ ಮೇಲೆ ಕುಳಿತಿದ್ದಾರೆ. ತನ್ನ ತಾಯನ್ನಲ್ಲದೆ ಬೇರೆ ಏನನ್ನೂ ಅರಿಯದ ಐದು ವರ್ಷದ ಮಗುವಿನಂತೆ ಕುಳಿತಿದ್ದಾರೆ. ನವಗೋಪಾಲ, ಮಾಸ್ಟರ್, ಇನ್ನೂ ಕೆಲವು ಮಂದಿ ಭಕ್ತರು ಅಲ್ಲಿ ಕುಳಿತಿದ್ದಾರೆ. ಸುರೇಂದ್ರನೂ ಬಂದಿದ್ದಾನೆ. ಆತನ ಮನೆಯಲ್ಲಿ ಕಳೆದ ಮೂರು ದಿನಗಳಿಂದ ದುರ್ಗಾಪೂಜೆ ನಡೆಯುತ್ತಿದೆ. ಪರಮಹಂಸರಿಗೆ ದೇಹಾರೋಗ್ಯ ಸರಿಯಾಗಿಲ್ಲದೆ ಇರುವುದರಿಂದ ಅವರಿಗೆ ಆತನ ಮನೆಗೆ ಹೋಗಲಾಗಲಿಲ್ಲ.

ಶ್ರೀರಾಮಕೃಷ್ಣರು (ಸುರೇಂದ್ರನಿಗೆ): 'ನಿನ್ನೆ ರಾತ್ರಿ ಸುಮಾರು ಏಳೂವರೆ ಸಮಯದಲ್ಲಿ ನಿನ್ನ ಪೂಜಾಂಗಣವನ್ನು ಭಾವದಲ್ಲಿ ನೋಡಿದೆ. ಪ್ರತಿಮೆ ಜ್ಯೋತಿರ್ಮಯವಾಗಿತ್ತು. ಇಲ್ಲಿಂದ ನಿನ್ನ ಮನೆಯವರೆಗೂ ಒಂದು ಬೆಳಕಿನ ಪ್ರವಾಹ ಹರಿದು ನಿಂತಿತ್ತು.'

*ಶ್ರೀರಾಮಕೃಷ್ಣ ವಚನವೇದ* ದಿಂದ